ದಿನಾಂಕಃ19-02-2025 ರಂದು ಡಿ.ಡಬ್ಲ್ಯೂ-2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ.ಸಿ.ಆರ್.ಎಸ್ ವಕೀಲರಿಂದ ಃ

1. ನನ್ನ ಸಾಕ್ಷ್ಯ ಪ್ರಮಾಣ ಪತ್ರ ಸಿದ್ದಪಡಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನಾನು 1 ನೇ ಪ್ರತಿವಾದಿಯಿಂದ ಮಾಹಿತಿ ಪಡೆದು ನನ್ನ ಸಾಕ್ಷ್ಯ ಪ್ರಮಾಣ ಪತ್ರ ಸಿದ್ದಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರವನ್ನು ನಾನು 20 ವರ್ಷಗಳ ಹಿಂದೆ ಬರೆದಿರುವುದರಿಂದ ಅದರ ಬಗ್ಗೆ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ. ಮೃತ್ಯುಪತ್ರ ಬರೆಸಲು ಬಾಗವ್ವ ತರತರಿರವರು ನನಗೆ ಮಾಹಿತಿ ನೀಡಿರುತ್ತಾರೆ. ಸದರಿ ಬಾಗವ್ವ ತರತರಿರವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲವಾದ್ದರಿಂದ 1 ನೇ ಪ್ರತಿವಾದಿ ಸದರಿ ಮೃತ್ಯು ಪತ್ರ ಸಿದ್ದಪಡಿಸಲು ನನಗೆ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರ ಬರೆಸುವಾಗ ಬಾಗವ್ವರವರಿಗೆ ಸುಮಾರು 70 ವರ್ಷ ವಯಸ್ಸು ಆಗಿತ್ತು.

2. ಆಸ್ತಿಗಳ ಉತಾರೆಗಳನ್ನು ನೋಡಿ ಸದರಿ ಮೃತ್ಯು ಪತ್ರದಲ್ಲಿ ಎರಡು ಬಾರಿ ½ ಮತ್ತು ಒಂದು ಬಾರಿ ¼ ಎಂದು ಬರೆದಿರುತ್ತೆನೆ. ನಾನು ಸದರಿ ವಿಷಯವನ್ನು ದಾಖಲೆ ನೋಡದೇ 1 ನೇ ವಾದಿಯ ಮಾತುಕೇಳಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಬಾಗವ್ವರವರಿಗೆ ಮಕ್ಕಳು ಇದ್ದಾರೇಯೇ? ಎಂಬ ಪ್ರಶ್ನೇಗೆ ಸಾಕ್ಷಿಯು ಬಾಗವ್ವ ಈ ವಿಷಯದ ಬಗ್ಗೆ ಸಾಕ್ಷಿಯು ನನಗೆ ಏನು ಹೇಳಿಲ್ಲ ಎಂದು ನುಡಿಯುತ್ತಾರೆ. ಬಾಗವ್ವ ಮತ್ತು ಲಕ್ಷ್ಮವ್ವ ಇವರುಗಳು ದೇವದಾಸಿಯರಾಗಿದ್ದು ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-5 ರಲ್ಲಿಯ ಮಾಹಿತಿಗಳನ್ನು 1 ನೇ ಪ್ರತಿವಾದಿ ನನಗೆ ಹೇಳಿ ಬರೆಸಿರುತ್ತಾನೆ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿ ಜಮಖಂಡಿ ನಿವಾಸಿಯಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸಂಘಸಂಸ್ಥೆಗಳು ಮಾಡಿಕೊಂಡಿದ್ದು, ಆತನ ಮಾತನ್ನು ಕೇಳಿ ನಾನು ನಿಡಿ-5 ನ್ನು ಸಿದ್ದಪಡಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ನನಗೆ ಸಾಕ್ಷ್ಯ ನುಡಿಯಬೇಕು ಎಂದು 1 ನೇ ಪ್ರತಿವಾದಿಯು ಮನವಿ ಮಾಡಿರುತ್ತಾರೆ. ನಾನು 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ

ನನಗೆ ಪರಿಚಯವಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳುಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ದಿನಾಂಕ:19-02-2025 ರಂದು ಡಿ.ಡಬ್ಲ್ಯೂ-3 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ.ಸಿ.ಆರ್.ಎಸ್ ವಕೀಲರಿಂದ ಃ

1. ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ಹೇಳಲು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ನನಗೆ ವಕೀಲರು ಸಾಕ್ಷ್ಯ ನುಡಿಯಲು ಬರಬೇಕು ಎಂದು ಹೇಳಿದ್ದರಿಂದ, ನಾನು ಸಾಕ್ಷ್ಯ ಹೇಳಲು ಬಂದಿರುತ್ತೇನೆ. ನನ್ನನ್ನು 1 ನೇ ಪ್ರತಿವಾದಿ ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯಬೇಕು ಎಂದು ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ.

2. ಬಾಗವ್ವ ಇವರ ತಂದೆ, ತಾಯಿ ಹಾಗೂ ಆಕೆಯ ಸಹೋದರರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಬಾಗವ್ವ ಇವರು ನನಗೆ ಪರಿಚಯವಿದ್ದರು. ಸದರಿ ಬಾಗವ್ವ ಇವರು ನನಗಿಂತ 30 ವರ್ಷ ಹಿರಿಯರು ಆಗಿದ್ದರು. ಸದರಿ ಬಾಗವ್ವ ಇವರಿಗೆ ನನ್ನನ್ನು ಹೊರತುಪಡಿಸಿ ಬೇರೆ ಸಾಕಷ್ಟು ಜನ ಸಮೀಪದ ಸಂಬಂಧಿಗಳು ಇದ್ದರು ಎಂದರೆ ಸರಿ. ಸದರಿ ಸಂಬಂಧಿಗಳು ಅಕ್ಷರಸ್ಥರು ಆಗಿದ್ದರು ಎಂದರೆ ಸರಿ. ಸದರಿ ಬಾಗವ್ವರವರು ಮೃತ್ಯು ಪತ್ರ ಬರೆಸುವುದಕ್ಕಿಂತ ಪೂರ್ವದಲ್ಲಿ ಯಾರ ಮನೆಯಲ್ಲಿ ಬೈಠಕ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಗವ್ವರವರ ಕುಟುಂಬದ ಆಸ್ತಿಗಳ ಬಗ್ಗೆ ಮತ್ತು ಕುಟುಂಬದ ಸದಸ್ಯರ ಹಿತಾಸಕ್ತಿಗಳ ಕುರಿತಾಗಿ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ.

3. ನಾನು 1 ನೇ ಪ್ರತಿವಾದಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬಾಗವ್ವರವರು ಮೃತ್ಯು ಪತ್ರ ಮಾಡಿಕೊಡುವುದಕ್ಕಿಂತ ಎರಡು ದಿನ ಮುಂಚೆ ನನ್ನನ್ನು ತಮ್ಮ ಮನೆಗೆ ಕರೆಸಿಕೊಂಡಿದ್ದರು. ಆ ಸಮಯದಲ್ಲಿ ನಾನು ಮತ್ತು ಬಾಗವ್ವರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸದರಿ ಬಾಗವ್ವರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸದರಿ ಬಾಗವ್ವರವರು ಚಿತ್ತಾಪೂರ ಇವರಿಗೆ ಮೃತ್ಯು ಪತ್ರ ಬರೆಯಲು ಹೇಳಿದ್ದರು ಆ ಸಮಯದಲ್ಲಿ ನಾನು ಹಾಜರ ಇದ್ದೆ. ನಾನು ಮೃತ್ಯು ಪತ್ರದ ಒಳಾಂಶಗಳನ್ನು ತಿಳಿದುಕೊಂಡು ನಂತರ ಸಹಿ ಮಾಡಿರುತ್ತೇನೆ. ಸಹಿ ಮಾಡುವ ಸಮಯದಲ್ಲಿ ಬಾಗವ್ವರವರಿಗೆ ಮಕ್ಕಳು ಇರುವುದಿಲ್ಲವಾದ್ದರಿಂದ ಆಕೆಗೆ ಮೊಮ್ಮಕ್ಕಳು ಇರುವ

ಬಗ್ಗೆ ನಾನು ಪ್ರಶ್ನಿಸಿಲ್ಲ. 1 ನೇ ಪ್ರತಿವಾದಿಯು ಸದರಿ ಬಾಗವ್ವರವರ ಮೊಮ್ಮಗ ಇಲ್ಲದೇ ಹೋದರು ಸಹಿತ ಮೊಮ್ಮಗ ಎಂದು ಹೇಳಿ ನಾನು ಮತ್ತು 1 ನೇ ಪ್ರತಿವಾದಿ ಕೂಡಿ ಸದರಿ ಮೃತ್ಯು ಪತ್ರ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬಾಗವ್ವರವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಬಾಗವ್ವರವರು ಸಂಬಂಧಪಟ್ಟ ಇಲಾಖೆಗೆ ಭೇಟಿನೀಡಿ ದಾಖಲೆಗಳನ್ನು ಪಡೆದುಕೊಳ್ಳುವ ಶಕ್ತಿ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಶಾಮಿಲಾಗಿ ನಿಡಿ-5 ಮೃತ್ಯು ಪತ್ರವನ್ನು ಬಾಗವ್ವ, ಆಕೆಯ ಸಮೀಪದ ಸಂಬಂಧಿಕರಿಗೆ ಹಾಗೂ ವಾದಿಯರಿಗೆ ಗೊತ್ತಾಗದ ಹಾಗೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರ ತಯಾರಿಸುವ ಮೊದಲು ಸದರಿ ಬಾಗವ್ವ ಇವರ ಸಂಬಂಧಕರಿಗೆ ಮೃತ್ಯುಪತ್ರದ ವಿಷಯ ಗೊತ್ತಾಗಬಾರದು ಎಂದು ಬೈಠಕ ಮಾಡಿರಲಿಲ್ಲ ಎಂದರೆ ಸರಿಯಲ್ಲ.

4. ನಾನು ಸಮಾಜ ಸೇವೆ ಮಾಡುತ್ತೇನೆ ಎಂದರೆ ಸರಿ. ನಾನು ಸಾರ್ವಜನಿಕರಿಗೆ ತಹಸಿಲ್ ಕಾರ್ಯಾಲಯದಲ್ಲಿ ಮತ್ತು ರಿಕಾರ್ಡ ರೂಂನಲ್ಲಿರುವ ದಾಖಲೆಗಳನ್ನು ತೆಗೆಸಿಕೊಡುವಂತಹ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಿಡಿ-5 ಸಿದ್ಧಪಡಿಸಿದ ನಂತರದಲ್ಲಿ 1 ನೇ ವಾದಿಯ ಮಾತು ಕೇಳಿ ಸದರಿ ದಾಖಲೆ ಮೇಲೆ ನಾನು ಸಹಿ ಮಾಡಿರುತ್ತೇನೆ, ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಬಾಗವ್ವ ನನ್ನನ್ನು ಭೇಟಿಯಾಗಿ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಬಾಗವ್ವ ನನ್ನನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಹೆಚ್ಚು ಪಾಲು ಸಿಗಲಿ ಎಂದು ಆತನಿಗೆ ಅನೂಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ